

ರಾಜಾ ರವಿವರ್ಮನ ಕಲ್ಪನೆಯಲ್ಲಿ ಸೀತಾದೇವಿಯಿಂದ ಭೂಮಿ ಪ್ರವೇಶ
ಕಲಾಕೃತಿ ಕೃಪೆ: 'ಪರಸರಾಮ್ ಮಂಘಾರಾಮ್' ಪ್ರಕಾಶನದ 'ರಾಜಾ ರವಿವರ್ಮ: ದಿ ಪೈಂಟರ್ ಪ್ರಿನ್ಸ್'




■ ಗೀತಾ ಸೀತಾರಾಮ್

# ರವಿವರ್ಮ

ನಾನು ಬರೋಡಾದಲ್ಲಿದ್ದಾಗ ದಿವಾನ್ ಮಾಧವರಾಯರು ಹೇಳಿದ್ದರು 'ರಾಜರೇ, ನಿಮಗೊಂದು ವಿಚಾರ ಗೊತ್ತೆ? ಮಹಾರಾಜ ವಿಶಾಖಂ ತಿರುನಾಳರು ಕಾಶಿಗೆ ಹೋಗುವುದಕ್ಕಾಗಿ ಬಂದಿದ್ದಾರೆ. ಸದ್ಯ ಬೊಂಬಾಯಿಯಲ್ಲಿ ತಂಗಿದ್ದಾರೆ. ನೀವು ಹಿಂತಿರುಗಿದ ಮೇಲೆ ಅವರನ್ನು ಭೇಟಿಯಾಗಿ.'

ನನಗೇಕೋ ಸಿಟ್ಟುಬಂತು, 'ನಾನೇಕೆ ಅವರನ್ನು ಕಾಣಬೇಕು?' ಎಂದಿದ್ದೆ.

'ಎಷ್ಟೆಂದರೂ ಅವರು ತಿರುವನಂತಪುರದ ಮಹಾರಾಜರು. ನಿಮ್ಮ ಸಂಸ್ಥಾನದವರು. ನಿಮ್ಮನ್ನು ಗೌರವಿಸಿದ ಸಂಸ್ಥಾನ ಅದು'.

'ನಮ್ಮ ಗೌರವವನ್ನು ಕಿತ್ತುಕೊಂಡವರೂ ಅವರೇ ತಾನೇ' ಎಂದಿದ್ದೆ ಕುದಿಯುತ್ತಾ. 'ಹಾಗೆನ್ನಬೇಡಿ, ಮಹಾರಾಜರು ಈಗ ಬದಲಾಗಿರಲೂಬಹುದು' ಎಂದಿದ್ದರು.

ಬೊಂಬಾಯಿಗೆ ಹಿಂತಿರುಗಿ ಬಂದಾಗ ದಿವಾನರ ಮಾತಿಗೆ ಬೆಲೆಯಿತ್ತು ಅವರನ್ನು ಭೇಟಿಯಾದೆ. ನಾನಂದುಕೊಂಡಂತೆಯೇ ಅಸಮಾಧಾನದ ಮುಖದಲ್ಲಿ ನನ್ನನ್ನು ಸ್ವಾಗತಿಸಿ ಕೊಂಕು ನುಡಿದರು ವಿಶಾಖಂ ತಿರುನಾಳ್. 'ರವಿವರ್ಮರಿಗೆ ತಿರುವನಂತಪುರ ಮರೆತುಹೊದಂತಿದೆ'. 'ಇಲ್ಲಿ ಕೆಲಸಗಳು ಹೆಚ್ಚಾಗಿರುವುದರಿಂದ ಬಂದಿಲ್ಲ' ಎಂದೆ ಸಮಾಧಾನ ದನಿಯಲ್ಲೇ.

'ನಮ್ಮ ಅರಮನೆಯವರ ಚಿತ್ರಗಳನ್ನು ರಚಿಸಿಕೊಡಿ' ಎಂದರು. 'ಈಗ ಸಾಧ್ಯವಿಲ್ಲ. ಬರೋಡಾ ಭಾವನಗರ ಇವುಗಳಿಗೆ ಒಪ್ಪಿಕೊಂಡಿದ್ದೇನೆ.' 'ಹಾಗಾದರೆ ತಿರುವನಂತಪುರಕ್ಕೆ ಬರುವುದಿಲ್ಲವೇ?' 'ಬರುತ್ತೇನೆ, ನಿಮಗೆ ಅಗತ್ಯ ಎನಿಸಿದರೆ' 'ನಮಗೆ ಅಗತ್ಯವಿಲ್ಲ ಎಂದರೆ?' 'ಬರುವುದಿಲ್ಲ' ಎಂದೆ ಕಟುವಾಗಿ. ಮಹಾರಾಜರಿಗೂ ಸಿಟ್ಟು ಬಂದಿರಬೇಕು. ದುರ್ದಾನ ತೆಗೆದುಕೊಂಡವರಂತೆ ಎದ್ದುಹೋದರು.

ನನ್ನನ್ನು ಆಸ್ಥಾನದ ರಾಜ ಕಲಾವಿದ ಪದವಿಯಿಂದ